◆ **ನಮ್ಮ ವಿಶ್ವವಿದ್ಯಾಲಯಗಳು ಮೃತಸ್ಥಿತಿ ತಲುಪುತ್ತಿವೆ. ಇದರಿಂದ ಭಾಷೆಗಳಿಗೆ, ಒಟ್ಟಾರೆ ಸಂಸ್ಕೃತಿಗೆ ಬಿದ್ದ ಹೊಡೆತ ಏನು?**

ಉನ್ನತ ಶಿಕ್ಷಣದ ಸವಾಲುಗಳನ್ನು ಎದುರಿಸಲು ನಮ್ಮ ವಿವಿಗಳು ಇನ್ನೂ ತಯಾರಾಗಿಲ್ಲ. ಒಂದು ಬಗೆಯ ಮುಗ್ಧತೆಯಲ್ಲಿ ಅವು ಕಾಲ ಕಳೆಯುತ್ತಿವೆ. ಜೊತೆಗೆ ನಮ್ಮ ವಿಶ್ವವಿದ್ಯಾಲಯಗಳು ಜಾತಿ ಮತ್ತು ಸಮುದಾಯಗಳಿಗೆ ಗಟ್ಟಿಯಾಗಿ ಅಂಟಿಕೊಂಡಿವೆ. ವಿಶ್ವವಿದ್ಯಾಲಯಗಳು ಪ್ರಗತಿಗಾಮಿಯಾಗಿರಬೇಕೆಂಬುದು ನಮ್ಮ ನಂಬಿಕೆ. ಆದರೆ ಅವು ಹಾಗಾಗದೆ, ಪ್ರತಿಗಾಮಿಗಳಾಗಿವೆ. ಈಚಿನ ದಿನಗಳಲ್ಲಿ ಜಾತೀಯತೆಗೆ ಕೋಮುವಾದವೂ ಸೇರಿಕೊಂಡಿದೆ, ಲೈಂಗಿಕ ಶೋಷಣೆಗಳೂ ನಡೆಯುತ್ತಿವೆ. ಭ್ರಷ್ಟಾಚಾರದ ಬಗ್ಗೆ ಎಲ್ಲರಿಗೂ ಗೊತ್ತಿದೆ.

ಹೀಗೆ ವಿವಿಗಳು ಒಳಗಿನಿಂದ ನಾಶವಾಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಅವು ಇಂದಿನ ಜಾಗತೀಕರಣ ಪ್ರಕ್ರಿಯೆಯ ತೀವ್ರ ಹೊಡೆತಕ್ಕೆ ಸಿಕ್ಕಿ ನಲುಗುತ್ತಿವೆ. ಇಂದಿನ ಬದಲಾದ ಪರಿಸ್ಥಿತಿಗೆ ಅನುಗುಣವಾದ ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ತರುವಲ್ಲಿ ಅವು ವಿಫಲವಾಗಿವೆ. ಆಗಲೇ ಅನೇಕ ಖಾಸಗಿ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿವೆ. ವಿದೇಶೀ ಅಧ್ಯಾಪಕರುಗಳು ಮತ್ತು ಭಾರತೀಯ ಅಧ್ಯಾಪಕರುಗಳು ಒಟ್ಟಿಗೇ ಕೆಲಸ ಮಾಡಲು ಸಾಧ್ಯವಾಗುವ ಹಾಗೆ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕ್ರಮಗಳು ಉನ್ನತ ಶಿಕ್ಷಣದ ರೀತಿ ನೀತಿಗಳನ್ನು ಗಮನಾರ್ಹವಾಗಿ ಬದಲಾಯಿಸಿವೆ. ಇಂಥ ಬದಲಾದ ಪರಿಸ್ಥಿತಿಯಲ್ಲಿ ನಮ್ಮ ವಿವಿಗಳು ಎಲ್ಲಿ ನಿಂತಿವೆ ಎಂದು ಯೋಚಿಸಿದರೆ ಭಯವಾಗುತ್ತಿದೆ. ನಮ್ಮಲ್ಲಿ ಈಗ ನೇಮಕವಾಗುತ್ತಿರುವ ಉಪಕುಲಪತಿಗಳಲ್ಲಿ ಎಷ್ಟು ಜನರೊಡನೆ ಈ ವಿಷಯಗಳ ಬಗೆಗೆ ಸಂವಾದ ನಡೆಸಲು ಸಾಧ್ಯವಾದೀತು ಎಂದು ಯೋಚಿಸಿದರೆ ವಿಷಾದ ಮೂಡುತ್ತದೆ.

◆ **ಸಾವಿನ ಸಮೀಪ ಹೋಗಿ ಬಂದಿದ್ದೀರಿ. ಅದು ನಿಮ್ಮ ಬದುಕಿನ ಕುರಿತ ನೋಟವನ್ನು ಹೇಗೆ ಮಾರ್ಪಾಟು ಮಾಡಿದೆ? ಬದುಕನ್ನು ನೋಡುವ ಈಗ ನೋಡುವ ಬಗೆ ಹೇಗೆ?**

ಅಂಥ ಬದಲಾವಣೆಯೇನೂ ಆಗಿಲ್ಲ. ಸಮಾಜದ ಬಗ್ಗೆ, ಅವರಿವರ ಬಗ್ಗೆ ಹೆಚ್ಚು ಯೋಚಿಸುತ್ತಾ, ಬರೆಯುತ್ತಾ, ಹೋರಾಟಗಳನ್ನು ಸಂಘಟಿಸುತ್ತಿದ್ದ ನಾನು ಆ ಘಟನೆಯ ಅನಂತರ ಮೊದಲ ಬಾರಿಗೆ ನನ್ನ ಬಗ್ಗೆಯೂ ಯೋಚಿಸತೊಡಗಿದೆ. ಅದು ಸಾಕಷ್ಟು ಫಲ ನೀಡಿದೆ. ಏನಿದ್ದರೂ ಸಾವನ್ನು ಹತ್ತಿರದಿಂದ ನೋಡಿ ಬಂದಮೇಲೆ, ಸಾವಿನ ಬಗ್ಗೆ ಈಗ ಯಾವ ಭಯವೂ ಉಳಿದಿಲ್ಲ. ಅದು ಯಾವಾಗ ಬಂದರೂ ತಬ್ಬಿಕೊಳ್ಳುವ ವಿಶ್ವಾಸ ಬೆಳೆಸಿಕೊಂಡಿದ್ದೇನೆ.

◆ **ಈಗ ಆತ್ಮಕತೆ ಬರೆದಿದ್ದೀರಿ. ಆತ್ಮಕತೆ ಬರೆದ ಬಳಿಕ ಬದುಕು ಈಗ ನಿಮಗೆ ಹೇಗೆ ಕಾಣುತ್ತಿದೆ?**

ಇನ್ನೂ ಪೂರ್ತಿ ಬರೆದು ಮುಗಿಸಿಲ್ಲ. ಯಾವಾಗ ಮುಗಿಯುತ್ತೋ ತಿಳಿದಿಲ್ಲ. ಆತ್ಮಕತೆ ಬರೆವಷ್ಟು ದೊಡ್ಡ ಜನ ನಾನಲ್ಲ ಎಂಬ ಭಾವ ಮೂಡಿದ ತಕ್ಷಣ ಬರವಣಿಗೆ ನಿಂತು ಹೋಗುತ್ತದೆ. ಆತ್ಮಕತೆ ಎಂಬುದು ಮನುಷ್ಯನ ಅಹಂಕಾರದ ಅಭಿವ್ಯಕ್ತಿ ಇರಬಹುದೇ ಎಂಬ ಪ್ರಶ್ನೆ ಹುಟ್ಟಿಕೊಂಡಾಗ ಅಹಮಿನ ನಿರಸನದಲ್ಲಿ ಒಂದಷ್ಟು ದಿನ ಹೊರಟು ಹೋಗುತ್ತದೆ. ಆದರೆ ಕಳೆದ ಕಾಲದ ಬಗ್ಗೆ ಬರೆಯುವುದು ಖುಷಿಯ ಸಂಗತಿಯೇ ಸರಿ. ವರ್ತಮಾನ ಕಾಲದ ಬಿಕ್ಕಟ್ಟುಗಳನ್ನು ಮರೆಯುವ ಕ್ರಮವೂ ಅದು ಹೌದಲ್ಲ?

❖